**ದಿನಾಂಕಃ 16.03.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಂ.ಎಂ.ಯು. ವಕೀಲರಿಂದಃ –**

14. ನಾನು ಶೋಧನಾ ವಾರೆಂಟ್ ಪಡೆದ ಸಮಯದಲ್ಲಿ ಪೊಲೀಸ್ ನಿರೀಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೆನು. ಪೊಲೀಸ್ ಅಧೀಕ್ಷಕರು ಆ ಸಮಯದಲ್ಲಿ ಈ ಪ್ರಕರಣದ ಎಲ್ಲಾ ಸಾರಾಂಶವನ್ನು ತಿಳಿಸಿದ್ದರು. ನ್ಯಾಯಾಲಯವು ಆರೋಪಿಯ ವಿರುದ್ಧ ಮಾಡಿದ ದೋಷರೋಪಣೆಯನ್ನು ನಾನು ಓದಿ ನೋಡಿರುವುದಿಲ್ಲ.

15. ನಿಪಿ–26 ರ ಸಮಯದಲ್ಲಿ ನನ್ನ ಸಿಬ್ಬಂದಿ ಹಾಗೂ ಪಂಚಸಾಕ್ಷಿಗಳು ಮಂಜುಳಾ, ರಾಮಕೃಷ್ಣ ಮತ್ತು ಲಕ್ಷ್ಮೀ ನಾರಾಯಣರವರು ಇದ್ದರು. ಮೇಘನಾ ಫಾರಂ ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ದಾಖಲೆಗಳ ಬಗ್ಗೆ ವಿಚಾರಿಸಿದಾಗ ಅದು ಆರೋಪಿಯೊಡನೆ ಲೋಕೇಶರವರು ಇದೆ ಎಂದು ತಿಳಿದುಬಂತು. ಆತನು ಸದರಿ ತೋಟವನ್ನು ನೋಡಿಕೊಳ್ಳುತ್ತಿದ್ದ ಕೆಲಸಗಾರ. ಆತನನ್ನು ಕೆಲಸಕ್ಕೆ ಆರೋಪಿ ನೇಮಿಸಿದ್ದಾರೆ ಎಂದು ಆತನು ತಿಳಿಸಿರುತ್ತಾನೆ. ಸದರಿ ತೋಟದಲ್ಲಿ ಸಿದ್ದೇಗೌಡ ಎಂಬುವವರು ಸಹ ಇದ್ದರು. ನಾವು ಸ್ಥಳಕ್ಕೆ ಹೋದಾಗ ಮಹದೇವಮ್ಮ ಮತ್ತು ಪ್ರಕಾಶ್ ಇದ್ದರು. ಅವರ ಸಹಿಗಳನ್ನು ಮಹಜರಿಗೆ ಪಡೆದಿಲ್ಲ. ಆ ಸಮಯದಲ್ಲಿ ಅವರಿಬ್ಬರು ಸ್ಥಳದಲ್ಲಿ ಇರಲಿಲ್ಲ ಅವರು ಕುರಿ ಮತ್ತು ದನ ಮೇಯಿಸಲು ಹೋಗಿದ್ದರು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೇಘನಾ ಫಾರಂನಲ್ಲಿ ಬೇರೆ ಯಾವುದೇ ದಾಖಲೆಗಳು ನಮಗೆ ಸಿಕ್ಕಿರುವುದಿಲ್ಲ.

16. ಸದರಿ ಸ್ಥಳದಲ್ಲಿ ಇದ್ದ ಕೊಟ್ಟಿಗೆಯಲ್ಲಿ ಯಾವುದೇ ದನಗಳು ಕಂಡು ಬರುವುದಿಲ್ಲ. ಅಲ್ಲಿದ್ದ ಕುರಿ ಮತ್ತು ದನಗಳು ಇದ್ದವೆ ಎಂಬ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಅವುಗಳನ್ನು ಮೇವಿಗೆ ಕರೆದುಕೊಂಡು ಹೋಗಲಾಗಿದೆ ಎಂದು ವಿಚಾರಿಸಿರುವುದಿಲ್ಲ. ಅವುಗಳನ್ನು ಮಹದೇವಮ್ಮ ಮತ್ತು ಪ್ರಕಾಶರವರು ಮೇಯಿಸಲು ಕರೆದು ಕೊಂಡ ಹೋದ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ಟ್ರೈಲರ್ ಆರೋಪಿಗೆ ಸಂಬಂಧಪಟ್ಟದ್ದು ಎಂದು ಲೋಕೇಶ್ ತಿಳಿಸಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಮಹದೇವಮ್ಮನವರು ಸದರಿ ತೋಟದಲ್ಲಿ ಕೆಲಸ ಮಾಡುತ್ತಾರೆ ಎಂದು ತಿಳಿಸಿದರು, ಏನು ಕೆಲಸ ಮಾಡುತ್ತಾರೆ ಎಂದು ನಾನು ಕೇಳಿರುವುದಿಲ್ಲ. ಮಹದೇವಮ್ಮನವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ವೇತನವನ್ನು ಆರೋಪಿ ನೀಡುತ್ತಿದ್ದಾರೆ ಎಂದು ಲೋಕೇಶ್

ತಿಳಿಸಿರುತ್ತಾರೆ. ಈ ವಿಷಯವನ್ನು ಮಹಜರಿನಲ್ಲಿ ಬರೆದಿರುತ್ತೇನೆ. ಅದನ್ನು ಆರೋಪಿ ನೀಡುತ್ತಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿ. ಲೋಕೇಶರವರ ಹೇಳಿಕೆಯನ್ನು ನಾನು ಪ್ರತ್ಯೇಕವಾಗಿ ತೆಗೆದುಕೊಂಡಿಲ್ಲ.

17. ಸದರಿ ತೋಟದಲ್ಲಿದ್ದ ಕಟ್ಟಡದ ವಿಸ್ತೀರ್ಣ ಮಹಜರಿನಲ್ಲಿ ಬರೆದಿದ್ದೇನೆ. ಪಂಚಸಾಕ್ಷಿಗಳು ಹಾಗೂ ಲೋಕೇಶ್ ಮತ್ತು ಸಿದ್ದೇಗೌಡರವರ ಹೇಳಿಕೆ ಹಾಗೂ ನನ್ನ ಅನುಭವದ ಮೇರೆಗೆ ಸದರಿ ಪಾರ್ಮ್ ಹೌಸ್ ಕಟ್ಟಡ ಮತ್ತು ಬೇಲಿಯ ಅಂದಾಜು ವೆಚ್ಚವನ್ನು ಬರೆದಿರುತ್ತೇನೆ. ಮಹಜರ್ ಸಮಯದಲ್ಲಿ ಕಟ್ಟಡದ ಮತ್ತು ಬೇಲಿಯ ಮೌಲ್ಯಮಾಪನ ಮಾಡಲು ರಿಜಿಸ್ಟರ್ಡ್ ವ್ಯಾಲ್ಯುಯೇಟರನ್ನು ಕರೆಸಲು ತೊಂದರೆ ಇರಲಿಲ್ಲ. ಸದರಿ ಜಮೀನನ್ನು ನಾವು ಅಳತೆ ಮಾಡಿರಲಿಲ್ಲ ಅದರ ಅಳತೆಯನ್ನು ಲೋಕೇಶ್ ಮತ್ತು ಸಿದ್ದೇಗೌಡರ ಹೇಳಿಕೆಯ ಮೇರೆಗೆ ಬರೆದಿರುತ್ತೇವೆ. ಆರೋಪಿಯು ಸಾಕಷ್ಟು ಹಣ ಖರ್ಚು ಮಾಡಿ ಜಮೀನು ಮಟ್ಟ ಮಾಡಿಸಿ ಬೋರ್ವೆಲ್ ಹಾಕಿಸಿ ಅಭಿವೃದ್ಧಿ ಪಡಿಸಿದ್ದಾರೆ ಎಂದು ಲೋಕೇಶ್ ಮತ್ತು ಸಿದ್ದೇಗೌಡರು ತಿಳಿಸಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ಬೋರ್ವೆಲ್ ಅವರ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲಾತಿ ನೋಡಿರುವುದಿಲ್ಲ.

18. ಅಲ್ಲಿ ತೆಂಗಿನ ಸಸಿಗಳು ಮತ್ತು ಬಾಳೆ ಗಿಡಗಳು ಎಷ್ಟಿದ್ದವು ಎಂದು ಲೆಕ್ಕ ಮಾಡಿರುವುದಿಲ್ಲ. ಅಲ್ಲಿದ್ದ ದೂರವಾಣಿ ಆರೋಪಿಯ ಹೆಸರಿನಲ್ಲಿ ಇದೆ ಎಂದು ಲೋಕೇಶ್ ಮತ್ತು ಸಿದ್ದೇಗೌಡರು ತಿಳಿಸಿರುತ್ತಾರೆ. ಅದರ ನಂಬರನ್ನು ಪಡೆದಿರುವುದಿಲ್ಲ. ಈ ಆಸ್ತಿ ಆರೋಪಿಗೆ ಸೇರಿರುವುದಿಲ್ಲ ಅದು ಪುಟ್ಟಗೌರಮ್ಮರವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಅವರೇ ಈ ತೋಟದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು ಮತ್ತು ಅದರ ಅಭಿವೃದ್ದಿಗೆ ಅವರೇ ಹಣ ಖರ್ಚು ಮಾಡಿ ಕೆಲಸಗಾರರಿಗೆ ಅವರೇ ವೇತನವನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸ್ಥಳದ ಚೆಕ್ಕುಬಂದಿ ಬರೆಯುವ ಮುನ್ನ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಸದರಿ ಚೆಕ್ಕುಬಂದಿಯನ್ನು ಲೋಕೇಶ್ ಮತ್ತು ಸಿದ್ದೇಗೌಡರು ಹೇಳಿಕೆಯ ಮೇರೆಗೆ ಬರೆದಿರುತ್ತೇವೆ.

19. ಮಹದೇವಮ್ಮರವರ ಸಹಿಯನ್ನು ನಾನು ಮಹಜರಿಗೆ ಪಡೆದಿರುವುದಿಲ್ಲ. ಅವರು ಆ ಸ್ಥಳದಲ್ಲಿ ಇಲ್ಲದೇ ಇದ್ದ ಕಾರಣ ಅವರ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಲೋಕೇಶ್ ಮತ್ತು ಸಿದ್ದೇಗೌಡರವರ ಹೆಬ್ಬೆಟ್ಟಿನ ಗುರುತನ್ನು ಪಂಚಸಾಕ್ಷಿಗಳು ಗುರುತಿಸಿರುತ್ತಾರೆ.

20. ನಿಪಿ-27ರ ಸಮಯದಲ್ಲಿ ನಿಪಿ-26ರ ಸಮಯದಲ್ಲಿ ಹಾಜರಿದ್ದ ಪಂಚಸಾಕ್ಷಿಗಳೇ ಇದ್ದರು. ನಿಪಿ-27ರ ಸಮಯದಲ್ಲಿ ಸದರಿ ಜಮೀನಿನ ಬಗ್ಗೆ ಅಲ್ಲಿದ್ದ ರೇವಣ್ಣರವರನ್ನು ವಿಚಾರಣೆ ಮಾಡಿರುತ್ತೇವೆ. ಸದರಿ ರೇವಣ್ಣರವರು ತನ್ನ ಹೆಂಡತಿ ಮಕ್ಕಳೊಂದಿಗೆ ವಾಸವಿದ್ದರು. ಈ ಜಮೀನು ಯಾರ ಹೆಸರಿನಲ್ಲಿದೆ ಮತ್ತು ಅದರ ವಿಸ್ತೀರ್ಣ ಎಷ್ಟೆಂದು ದಾಖಲೆಗಳನ್ನು ಪಡೆದಿರುವುದಿಲ್ಲ. ದಾಖಲಾತಿಗಳ ಬಗ್ಗೆ ವಿಚಾರಿಸಿದಾಗ ಅದು ಆರೋಪಿಯಲ್ಲಿದೆ ಎಂದು ರೇವಣ್ಣನವರು ತಿಳಿಸಿರುತ್ತಾರೆ. ಸ್ಥಳದಲ್ಲಿದ್ದ ವಸ್ತುಗಳು ಮತ್ತು ಔಷಧಿಗಳು ವ್ಯವಸಾಯಕ್ಕೆ ಉಪಯೋಗಿಸುತ್ತಾರೆ ಎಂದು ಮತ್ತು ಅವುಗಳನ್ನು ಆರೋಪಿಯು ಮತ್ತು ಅವರ ಪತ್ನಿ ತಂದುಕೊಟ್ಟಿರುತ್ತಾರೆ ಎಂದು ರೇವಣ್ಣನವರು ತಿಳಿಸಿರುತ್ತಾರೆ.

21. ಸ್ಥಳದಲ್ಲಿದ್ದ ಟ್ರಾಕ್ಟರ್ ಯಾರದ್ದು ಎಂದು ಕೇಳಿದಾಗ ಅದು ಆರೋಪಿಗೆ ಸೇರಿದ್ದು ಎಂದು ರೇವಣ್ಣನವರು ತಿಳಿಸಿದ್ದು ಆ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ಟ್ರಾಕ್ಟರ್ ಮತ್ತು ಟ್ರಾಲಿಗೆ ಬೇರೆ ಬೇರೆ ನಂಬರಿದ್ದಾಗಿರುತ್ತದೆ.

22. ವಿದ್ಯುಚ್ಛಕ್ತಿ ಮೀಟರ್ ಹಾಗೂ ದೂರವಾಣಿ ಆರೋಪಿಯ ಹೆಸರಿನಲ್ಲಿ ಇದೆ ಎಂದು ರೇವಣ್ಣನವರು ತಿಳಿಸಿರುತ್ತಾರೆ.

23. ಸದರಿ ತೋಟದಲ್ಲಿ ಕುರಿಗಳು ಮತ್ತು ದನಗಳು ಇದ್ದು ಅದನ್ನು ಮಹಜರಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಎತ್ತಿನಗಾಡಿ, ಎತ್ತುಗಳು ಹಾಗೂ ಇತರ ವಸ್ತುಗಳ ಬೆಲೆಗಳನ್ನು ರೇವಣ್ಣನವರು ಮತ್ತು ಪಂಚಸಾಕ್ಷಿಗಳ ಹೇಳಿಕೆ ಹಾಗೂ ನನ್ನ ಅನುಭವದ ಆಧಾರದಲ್ಲಿ ಬರೆದಿರುತ್ತೇನೆ. ಸದರಿ ಎತ್ತುಗಳಿಗೆ ಎಷ್ಟು ವಯಸ್ಸಾಗಿತ್ತು ಎಂದು ಈಗ ನನಗೆ ನೆನಪಿಲ್ಲ.

24. ಅಲ್ಲಿದ್ದ ಸೈಕಲು ಆರೋಪಿಗೆ ಸೇರಿದ್ದು ಎಂದು ರೇವಣ್ಣನವರು ತಿಳಿಸಿರುತ್ತಾರೆ.

25. ಎತ್ತುಗಳು ಆರೋಪಿಗೆ ಸೇರಿದ್ದು ಎಂದು ರೇವಣ್ಣನವರು ತಿಳಿಸಿರುತ್ತಾರೆ.

26. ಎಲಕ್ಕಿ ಬಾಳೆಗಿಡಗಳ ಅಂದಾಜು ಬೆಲೆಯನ್ನು ರೇವಣ್ಣನವರು ತಿಳಿಸಿರುತ್ತಾರೆ. ತೆಂಗಿನಗಿಡಗಳ ಬೆಲೆಯನ್ನು ನಮೂದಿಸಿಲ್ಲ. ಸದರಿ ತೆಂಗಿನಗಿಡಗಳು ಇನ್ನೂ ಫಲ ಕೊಡದೇ ಇದ್ದ ಕಾರಣ ಅದರ ಬೆಲೆಯನ್ನು ನಮೂದಿಸಿಲ್ಲ. ಬಾಳೆಗಿಡ ಸಸಿಗಳು ಫಲ ಕೊಡುತ್ತಿರಲಿಲ್ಲ. ಬೋರ್ವೆಲಗಳು ಆರೋಪಿಯ ಹೆಸರಿನಲ್ಲಿವೆ ಎಂದು ರೇವಣ್ಣನವರು ತಿಳಿಸಿರುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು

ಕೇಳಿದಾಗ ಆರೋಪಿಯಲ್ಲಿದೆ ಎಂದು ರೇವಣ್ಣನವರು ತಿಳಿಸಿರುತ್ತಾರೆ. ಬೋರ್ವೆಲ್ಗೆ ಸಂಬಂಧಿಸಿದ ಇತರ ವಸ್ತುಗಳನ್ನು ಆರೋಪಿಯೇ ಒದಗಿಸಿರುತ್ತಾರೆ ಎಂದು ರೇವಣ್ಣನವರು ತಿಳಿಸಿರುತ್ತಾರೆ.

27. ಕಲ್ಲುಕಂಬ ಮತ್ತು ಮುಳ್ಳುತಂತಿಯ ಮೌಲ್ಯವನ್ನು ರೇವಣ್ಣನವರು ಮತ್ತು ಪಂಚಸಾಕ್ಷಿಗಳ ಹೇಳಿಕೆ ಹಾಗೂ ನನ್ನ ಅನುಭವದ ಆಧಾರದಲ್ಲಿ ಬರೆದಿರುತ್ತೇನೆ. ರೇವಣ್ಣನವರ ಲಿಖಿತ ಹೇಳಿಕೆಯನ್ನು ಮಾಡಿಕೊಂಡಿಲ್ಲ.

28. ಆರೋಪಿಯು ರೇವಣ್ಣರವರಿಗೆ ಮತ್ತು ಮಹೇಶರವರಿಗೆ ಅಕ್ಕಿಯನ್ನು ತೆಗೆದುಕೊಡುತ್ತಾರೆ ಎಂದು ರೇವಣ್ಣ ತಿಳಿಸಿರುತ್ತಾರೆ. ಮಹೇಶರವರು ತನ್ನ ಜೊತೆ ಕೆಲಸ ಮಾಡುತ್ತಾರೆ ಎಂದು ರೇವಣ್ಣನವರು ತಿಳಿಸಿದ್ದು ಅವರನ್ನು ನಾನು ನೋಡಿರುವುದಿಲ್ಲ. ಆ ಸಮಯದಲ್ಲಿ ಮಹೇಶರವರು ಇರಲಿಲ್ಲ. ಈ ತೋಟವನ್ನು ಆರೋಪಿಯ ಹೆಂಡತಿ ಕೃಷಿ ಆದಾಯದಿಂದ ನಿರ್ವಹಿಸುತ್ತಿದ್ದರು ಮತ್ತು ನಾನು ಈ ತೋಟದ ಎಲ್ಲಾ ಖರ್ಚನ್ನು ಆರೋಪಿ ಮಾಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಲಸಗಾರರಿಗೆ ಸಂಬಳ ಕೊಡುವ ಬಗ್ಗೆ ಯಾವುದೇ ರಿಜಿಸ್ಟರ್ ಇರಲಿಲ್ಲ. ಟ್ರಾಕ್ಟರ್ ನಿಲ್ಲಿಸಲು ಉಪಯೋಗಿಸುತ್ತಿದ್ದ ಶೆಡ್ಡಿನ ಬೆಲೆಯನ್ನು ರೇವಣ್ಣ ಮತ್ತು ಪಂಚಸಾಕ್ಷಿಗಳ ಹೇಳಿಕೆ ಆಧಾರದಲ್ಲಿ ಬರೆದಿರುತ್ತೇನೆ. ರೇವಣ್ಣನವರು ಅಲ್ಲಿ ಎಷ್ಟು ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ತಿಳಿಸಿದ್ದು ಅದು ಈಗ ನನಗೆ ನೆನಪಿಲ್ಲ. ಸ್ಥಳದ ಚೆಕ್ಕುಬಂದಿಯನ್ನು ರೇವಣ್ಣನವರ ಹೇಳಿಕೆಯ ಆಧಾರದಲ್ಲಿ ಬರೆದಿರುತ್ತೇನೆ ಮತ್ತು ಆ ಬಗ್ಗೆ ಯಾವುದೇ ದಾಖಲಾತಿ ಬರೆದಿಲ್ಲ.

29. ನಿಪಿ-28ರ ಸಮಯದಲ್ಲಿ ತೋಟಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ. ಆರೋಪಿಯ ಬಳಿ ಈ ದಾಖಲಾತಿಗಳ ಬಗ್ಗೆ ಕೇಳಿದಾಗ ತನ್ನಲ್ಲಿ ಈ ಸಮಯದಲ್ಲಿ ಇಲ್ಲ ನಂತರ ಅದನ್ನು ಹಾಜರು ಪಡಿಸುವುದಾಗಿ ತಿಳಿಸಿರುತ್ತಾರೆ. ಸದರಿ ಮನೆಯ ಒಳಗಡೆ ಇದ್ದ ಮಹಜರಿನಲ್ಲಿ ವಿವರಿಸಿದ ವಸ್ತುಗಳು ಆರೋಪಿಗೆ ಸೇರಿದ್ದಾಗಿರುತ್ತವೆ. ಈ ವಿಷಯವನ್ನು ಆರೋಪಿಯೇ ನಮಗೆ ತಿಳಿಸಿರುತ್ತಾರೆ. ಈ ವಿಷಯವನ್ನು ಆರೋಪಿ ನಮಗೆ ತಿಳಿಸಿರುತ್ತಾರೆ ಎಂದು ನಿಪಿ-28ರಲ್ಲಿ ಬರೆದಿಲ್ಲ. ನಿಪಿ-28ರಲ್ಲಿರುವ ಕ್ರ.ಸಂ.21ರಲ್ಲಿ ಹೇಳಿರುವ ವಾಟರ್ ಗೀಜರನ್ನು 2005ರಲ್ಲಿ ಖರೀದಿಸಿದ್ದೇನೆ ಎಂದು ಆರೋಪಿ ತಿಳಿಸಿರುತ್ತಾರೆ. ಈ ವಿಷಯವನ್ನು ಮಹಜರಿನಲ್ಲಿ ಹೇಳಿರುವುದಿಲ್ಲ. ಅದರ ಮೌಲ್ಯವನ್ನು ಆರೋಪಿಯು ಹೇಳಿದ ಆಧಾರದಲ್ಲಿ ಬರೆದಿರುತ್ತೇನೆ. ಅದರ ಬೆಲೆಯನ್ನು ನಾನು ಪರಿಶೀಲಿಸಿರುವುದಿಲ್ಲ.

30. ನಿಪಿ-28 ರ ಸಮಯದಲ್ಲಿ ಲೋಕೇಶ್ ಮತ್ತು ಅವರ ಕುಟುಂಬದವರು ಇದ್ದರು ಮತ್ತು ಅವರ ಸಹಿಗಳನ್ನು ಮಹಜರಿಗೆ ಪಡೆದಿರುವುದಿಲ್ಲ. ಆ ಸಮಯದಲ್ಲಿ ಲೋಕೇಶ್ ಮತ್ತು ಅವರ ಕುಟುಂಬದವರು ಸ್ಥಳದಲ್ಲಿ ಇರಲಿಲ್ಲ ಮತ್ತು ಅವರು ದನ ಮತ್ತು ಕುರಿ ಮೇಯಿಸಲು ಹೋಗಿದ್ದರು ಎಂದರೆ ಸರಿಯಲ್ಲ.

31. ನಿಪಿ-28 ರಲ್ಲಿ ಬರೆದಿರುವ ಚೆಕ್ಕುಬಂದಿಯನ್ನು ಆರೋಪಿಯು ನಮಗೆ ಹೇಳಿರುತ್ತಾರೆ. ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ತೋರಿಸಿದ ಜಮೀನು ಆರೋಪಿಗೆ ಸಂಬಂದಪಟ್ಟದ್ದಾಗಿರುತ್ತದೆ. ಸದರಿ ಚೆಕ್ಕುಬಂದಿ ತೋಟದ ಮನೆಯಲ್ಲಿದ್ದ ಜಮೀನಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಉತ್ತರಕ್ಕೆ ಪಿರ್ಯಾದಿಯವರ ಜಮೀನು ಇರುತ್ತದೆ ಎಂದು ತಪ್ಪಾಗಿ ಬರೆಯಲಾಗಿದೆ. ಅದು ಆರೋಪಿಗೆ ಸಂಬಂಧಪಟ್ಟ ಜಮೀನು ಎಂದು ಆಗಬೇಕಾಗಿರುತ್ತದೆ.

32. ವಸ್ತುಗಳ ಬೆಲೆಯನ್ನು ಆರೋಪಿಯ ಹೇಳಿಕೆಯ ಮೇರೆಗೆ ನಿಪಿ-28 ರಲ್ಲಿ ಬರೆಯಲಾಗಿದೆ. ಅವುಗಳ ಬಗ್ಗೆ ಬಿಲ್ಲುಗಳನ್ನು ಕೇಳಿದಾಗ ಅವುಗಳು ಆಗ ತನ್ನಲ್ಲಿಲ್ಲ ಎಂದು ಆರೋಪಿ ಹೇಳಿರುತ್ತಾರೆ. ನಿಪಿ-26 ಮತ್ತು 28 ರ ಸಮಯದಲ್ಲಿ ಪುಟ್ಟಗೌರಮ್ಮ ಸ್ಥಳದಲ್ಲಿ ಇದ್ದರೂ ಸಹ ಅದನ್ನು ಮಹಜರಿನಲ್ಲಿ ಉದ್ದೇಶಪೂರ್ವಕವಾಗಿ ಬರೆದಿಲ್ಲ ಮತ್ತು ಅವರ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.